4. ಪ್ರತಿ ದರಖಾಸ್ತಿನಲ್ಲಿಯೂ ದರಖಾಸ್ತುದಾರನು ಡಿಪೋಕ್ಕೆ ತಲಿಪಿಸಿ ಡಿಪೋ ಇಂಛಾರ್ಜ್ ನವುಕರನಿಂದ ತೆಗದುಕೊಳ್ಳಲ್ಪಟ್ಟ ಚೌಬೀನಿಗೆ ಕುಯಿದ ಮತ್ತು ಯೆಳದ ನಾಟಾಗಳಿಗೆ ಪ್ರತಿ ಸಲಅಡಿ 1ಕ್ಕೆ ಖಾಯಿಷ್ ಮಾಡುವ ಕಮ್ಮೀ ದರವನ್ನು ಪ್ರತ್ಯೇಕ ಪ್ರತ್ಯೇಕ ವಾಗಿ ನಮೂದಿಸತಕ್ಕದ್ದು.

5. ಡೆಪ್ಯುಟಿ ಕಮ್ಮಿಷನರವರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿಯೇ ಪುಳಿಸಿಕೊಂಡಿರುತ್ತಾರೆ. ಮತ್ತು ಹಾಂಗೆ ತಿರಸ್ಕರಿಸುವ ಬಗ್ಯೆ ಅವರು ಯಾವ ಕಾರಣವು ತಿಳಿಸಬೇಕಾದ್ದಿಲ್ಲವು.

6. ಮಂಜೂರ್ ಮಾಡಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಅಂಗೀಕರಿಸಲ್ಪಟ್ಟ ತಾರೀಖು ಲಾಗಾಯತು ಎಂದು ವಾರದ ವಳಗಾಗಿ ತಕ್ಕ ಛಾಪಾ ಕಾಗದದಲ್ಲಿ ಕಂಟ್ರಾಕ್ಟು ಮುಚ್ಚಳಿಕೆಯನ್ನು ಬರದುಕೊಡದಿದ್ದರೆ ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡುವದು.

7. ಅಂಗೀಕರಿಸಲ್ಪಡದ ದರಖಾಸ್ತುದಾರರ ಡಿಪಾಜಿಟ್ ಮೊಬಲಗು ಕ್ರಮೇಣ ಅವರಿಗೆ ವಾಪಸ್ ಮಾಡಲ್ಪಡುವದು.

8. ಬಂದು ಮಾಡಲ್ಪಟ್ಟ ದರಖಾಸ್ತುಗಳು ಇದರಿಂದ ರುಜು ಮಾಡಿರುವವರಿಂದ ಸ್ರ 1887ನೇ ಇಸವಿ ಮೇ ತಾರೀಖು 31ರ ವರಿಗೆ ತೆಗದುಕೊಳ್ಳಲ್ಪಡುವದು.

9. ಕಂಟ್ರಾಕ್ಟು ಷರತ್ತುಗಳನ್ನು ಕುರಿತು ಯಾ ಇತರ ವಿಷಯಕವಾದ ವಿಶೇಷ ತಪಸೀಲ್‌ಗಳು ಹಾಸನದ ಡಿಸ್ಟ್ರಿಕ್ಟು ಫಾರೆಸ್ಟ್ ಪ್ರೊಬೇಷನರವರಿಂದ ತಿಳಿದುಕೊಳ್ಳಬಹುದು.

ಹೆಚ್. ಮುದ್ದಪ್ಪ,
ಫಾರೆಸ್ಟ್ ಪ್ರೊಬೇಷನರ್, ಹಾಸನ ರೇಂಜ್.

ಕಡೂರು ಡಿಸ್ಟ್ರಿಕ್ಟು.

ತಾರೀಖು 5ನೇ ಏಪ್ರೆಲ್ 1887.

ಕಡೂರು ಡಿಸ್ಟ್ರಿಕ್ಟು ಯಡೆಹಳ್ಳಿ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ಶೇವಾರಸ್ ದಸ್ತಾವೇಜನ್ನು ಕ್ರಮಪ್ರಕಾರ ವಾರಸ್‌ದಾರ್‌ರಾಗಲಿ ಅಥವಾ ಅಧಿಕಾರ ಹೊಂದಿದ ಮುಕ್ತಾಲೀಕರಾಗಲೀ ಈ ತಾರೀಖು ಲಾಗಾಯತು ಎಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡೆಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರೆ ನಾಶಪಡಿಸಲ್ಪಡುತ್ತೆ.

ದಸ್ತಾವೇಜಿನ ನಂಬರ್‌ಮತ್ತು ಸಬ್ ರಿಜಿಸ್ಟ್ರಾರ್ ಆಫೀಸ್ ಹೆಸರು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರೆಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಸ್ಟರ್ ಬಗ್ಯೆ ಹಾಜರ್ಮಾಡಿದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1ನೇ ಬುಕ್ಕು 11ನೇ ಸಂಪುಟ ನಂಬರ್ 35 1884—85 ಯಡೇಹಳ್ಳಿ ಸಬ್ ರಿಜಿಸ್ಟ್ರಾರ್.	ಕೊಪ್ಪ ತಾಲ್ಲೂಕು ಮುಡಬೂರ ಮಾಗಣಿಕು ಚಬ್ಬೆಗ್ರಾಮದಲ್ಲಿ ಇರುವ ಕಾಳೇಗೌಡನ ಮಗ ತಮ್ಮಯ್ಯಗೌಡ	ತೀರ್ಥಹಳ್ಳಿ ತಾಲ್ಲೂಕು ಮೂಳೂರು ಮಾಗಣಿ ಕುದೂರು ಗ್ರಾಮದಲ್ಲಿರುವ ಶೇಷಯ್ಯಗೌಡರ ಮಗ ಮಾನಪ್ಪಗೌಡರಿಗೆ	29ನೇ ಜನವರೀ 1885ನೇ ಇಸವಿ	29ನೇ ಜನವರೀ 1885ನೇ ಇಸವಿ	ಚಬ್ಬೆನಾಡುಗ್ರಾಮದಲ್ಲಿರತಕ್ಕ ಸ್ವತ್ತುಗಳು. 1 ಖಾನೆಷುಮಾರಿ ನಂಬರ್ 111ನೇ ತಖ್ತುಪೋಷ್ ಹಾಕಿದ ಹಂಚಿನ ಮನೆ 1ಕ್ಕೆ 13 ಅಂಕಣದ ಬಾಬತು. 2. ಸರ್ವೆ ನಂಬರ್ 169ನೇ ಕಾಫೀ ತೋಟ ಯಕರೆ 1–20 ಆಕಾರ 0–12–0 3. ಸರ್ವೆ ನಂ. 170ನೇ ಬಾಗಾಯತು ಯಕರೆ 3–37 ಆಕಾರ 24–0–0 4. ಸರ್ವೇ ನಂ. 172ನೇ ಪೈಕಿ ತರೀ ಯಕರೆ 8–4 ಆಕಾರ 23–4–0. 5. ಸರ್ವೆ ನಂ. 201ನೇ ತರೀ ಯಕರೆ 5–2 ಆಕಾರ 14–0–0 6. ಸರ್ವೆ ನಂ. 191ನೇ ಖುಷ್ಕಿ ಯಕರೆ 14–4 ಆಕಾರ 5–8–0 ಕುಟುಂಬ ಸಂರಕ್ಷಣೆಗೋಸ್ಕರ ನಡಿಸಿದ ಲೇವಾದೇವಿ ಬಾಬತು 400 ರೂಪಾಯಿ ಸಲ್ಲಬೇಕಾದ್ದಕ್ಕೆ 4 ವರುಷ ಕಂತಿನಿಂದ ಕೊಡುವದಾಗಿಯೂ ಇದಕ್ಕೆ ಮೇಲ್ಕಂಡ ಸೊತ್ತುಗಳು ದೀಡು ಮಾಡಿರುವದಾಗಿ ಒರ ಕೊಟ್ಟ ಪತ್ರ.

ತಾರೀಖು 10ನೇ ಏಪ್ರೆಲ್ 1887.

ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಸಬ್ ರಿಜಿಸ್ಟ್ರಾರ ಆಫೀಸ್‌ನಲ್ಲಿ ಇದರ ಕೆಳಗೆ ನಮೂದಿಸಿರುವ ಬೇವಾರಸ್ ದಸ್ತಾವೇಜುಗಳನ್ನು ಕ್ರಮಪ್ರಕಾರ ವಾರಸ್ದಾರ್‌ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.

ನಂಬ್ರ ನಂಬರ್.	ದಸ್ತಾವೇಜಿನ ನಂಬರ್ ಮತ್ತು ಸಬ್ ರಿಜಿಸ್ಟ್ರಾರ್ ಆಫೀಸ್ ಹೆಸರು.	ದಸ್ತಾವೇಜು ಬರಿಸಿಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಿಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರೇಷನ್ ಬಗ್ಗೆನ್ನು ಬರಬೇಕಾಗಿದ್ದ ತಾರೀಖು.	ರಿಜಿಸ್ಟ್ರೇಷನ್ ಆದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1	Iನೇ ಬುಕ್ಕು ನಂ. 250—1884—85 ಚಿಕ್ಕಮಗಳೂರು ಸಬ್ ರಿಜಿಸ್ಟ್ರಾರ್.	ದುಂಗೆರೆಯಲ್ಲಿರುವ ಬಸಪ್ಪಶೆಟ್ಟರ ಮಗ ಶಿವಾಚಾರ ಜಾತಿ ಸುಬ್ಬಶೆಟ್ಟಿ.	ದುಂಗೆರೆಯಲ್ಲಿರುವ ಮರಿಯಪ್ಪಶೆಟ್ಟಿ ಮಗ ಶಿವಾಚಾರ ಜಾತಿ ಒಸಪ್ಪಶೆಟ್ಟಿ.	1ನೇ ಡಿಸಂಬರ್ 1885ನೇ ಇಸವಿ.	1ನೇ ಡಿಸಂಬರ್ 1885ನೇ ಇಸವಿ.	ಕಡೂರು ಸಬಾರ್ಡಿನೇಟ್ ಜಡ್ಜ್ ಕೋರ್ಟು 1883ನೇ ಇಸವಿ ಅಮಲ್‌ಜಾರಿ ನಂಬರ್ 163ನೇ ಮೊಕದ್ದಮಾದಲ್ಲಿ ಪ್ರತಿವಾದಿಗಳಿಂದ ತನಿಗೆ ಬರಬೇಕಾದ 1,250 ರೂಪಾಯಿನ ಡಿಕ್ರೀಯನ್ನು ತನ್ನಿಂದ ಬರಿಸಿಕೊಂಡವನಿಗೆ ಸಲ್ಲಬೇಕಾದ 400 ರೂಪಾಯಿಗೆ ಸದರಿ ಡಿಕ್ರಿಯನ್ನು ಕ್ರಯಕ್ಕೆ ಕೊಟ್ಟು ಇರುವದಾಗಿ.
2	Iನೇ ಬುಕ್ಕು ನಂ. 350—1884—85 ಡಿಟೋ	ಹುಯಿಗೆರೆಯಲ್ಲಿರುವ ಲಿಂಗೆಗೌಡನ ಮಗ ವಕ್ಕಲ್ ಮಕ್ಕಳ ಜಾತಿ ಸುಬ್ಬೇಗೌಡ.	ಕೊಪ್ಪ ತಾ|| ಗುತ್ತೀರ್ಕಾ ಯೂರೋಪಿಯರ್ ಕಾಫಿ ಪ್ಲಾಂಟರ್ ಹರಬರ್ಟ್ ವಾರ್ಕ್ ಸ್ಟ್ಯಾಕಲ್ಯಾಂಡ್ ಸಾಹೇಬರು.	18ನೇ ಮಾರ್ಚಿ 1885.	18ನೇ ಮಾರ್ಚಿ 1885.	200 ರೂಪಾಯಿಗಳಿಗೆ ಹುಯಿಗೆರೆ ಗ್ರಾಮದಲ್ಲಿರುವ ನಂ. 43ನೇ ಕೂರಮ್ಮನ ಪುಡವೆ ಯೆಂಬ ತೋಟ ಪುದ್ಧ ಕ್ರಯಕ್ಕೆ ಕೊಟ್ಟರುವದಾಗಿ.
3	IVನೇ ಬುಕ್ಕು ನಂ. 14—1884—85 ಡಿಟೋ	ಮಲ್ಲಗಾರನಲ್ಲಿರುವ ವೀರೇಗೌಡನ ಮಗ ಶಿವಾಚಾರ ಜಾತಿ ಮುತ್ತೇಗೌಡ.	ಮಂಡ್ಯದಲ್ಲಿರುವ ಪಾಲಿ ಮಲಗಾರಲ್ಲಿರುವ ಕೃಷ್ಣಯ್ಯ ಸಂಪತ್ತು ಕೊಮಾರೈಯ್ಯಂಗಾರ್ರ ಮಕ್ಕಳು ಶ್ರೀವೈಷ್ಣವ ಬ್ರಾಹ್ಮಣ ನರಸಿಹ್ಮಯ್ಯಂಗಾರ್.	2ನೇ ಮಾರ್ಚಿ 1885.	2ನೇ ಮಾರ್ಚಿ 1885.	ಬರಿಸಿಕೊಂಡವರಿಗೆ ತಾನು ಕೊಡಬೇಕಾದ 50 ರೂಪಾಯಿಗಳಿಗೆ ಶೇಕಡಾ 1 ದರ ತಿಂಗಳು 1ಕ್ಕೆ 8 ಆಣೆ ವೀರಿಗೆ ಬಡ್ಡಿ ಕೀರಿಸಿ 1886ನೇ ಇಸವಿ ಮಾರ್ಚಿ ಆಖೈರ್ ವಳಗೆ ಅಸಲ್ ಬಡ್ಡಿ ಸಹ ಪಾವತಿಮಾಡುವದಾಗಿಯೂ ವಾಯಿದೆಗೆ ಸರಿಯಾಗಿ ಪಾವತಿ ಮಾಡದಿದ್ದರೆ ಶೇಕಡಾ 1ಕ್ಕೆ ತಿಂಗಳು 1ಕ್ಕೆ 1 ರೂಪಾಯಿ ಪ್ರಕಾರ ಹಣ ಪಾವತಿ ತಾರೀಖುವರಿಗೆ ಬಡ್ಡಿ ಕೀರಿಸಿ ಅಸಲ್ ಬಡ್ಡಿ ಸಹ ಕೊಡುವಂತೆ.

ಜಿ. ಎಫ್. ಮೈಕಲ್ಜಾನ್,
ರಿಜಿಸ್ಟ್ರಾರ್.